Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**

ವಿಶೇಷ ಸಂಚಿಕೆ

भाग IX अनुभाग 1
PART IX SECTION 1
ಭಾಗ IX ವಿಭಾಗ 1

**प्राधिकार से प्रकाशित**
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं–1 | नई दिल्ली सोमवार, दिसेम्बर 22, 1986 | पुष्य 1, 1908 (शक) | खण्ड–6 |
| No. 1 | New Delhi Monday, December 22, 1986 | Pushya 1, 1908 (Saka) | Vol. 6 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಡಿಸೆಂಬರ್ ೨೨, ೧೯೮೬ | ಪುಷ್ಯ ೧, ೧೯೦೮ (ಶಕ) | ಸಂಪುಟ ೬ |


## MINISTRY OF LAW AND JUSTICE
(Legislative Department)

New Delhi, October 30, 1986

The translations in Kannada of the following namely—(1) The All India Services Act, 1951 (2) The Muslim Personal Law (Shariat) Application Act, 1937 (3) The Identification of Prisoners Act, 1920 (4) The Government Saving Certificates Act, 1959 (5) The Indian Fisheries Act, 1897 (6) The Indian Christian Marriage Act, 1872 (7) The Census Act, 1948 (8) The Seamen's Provident Fund Act, 1966 (9) The Asian Development Bank Act, 1966 10) The Official Secrets Act, 1923.

ಕೆಳಕಂಡ ಅಧಿನಿಯಮಗಳು ಎಂದರೆ (೧) ಅಖಿಲ ಭಾರತ ಸೇವಾ ಅಧಿನಿಯಮ, ೧೯೫೧ (೨) ಮುಸ್ಲಿಮರ ವೈಯಕ್ತಿಕ ಕಾನೂನು (ಷರೀಯತ್) ಅನ್ವಯ ಅಧಿನಿಯಮ, ೧೯೩೭ (೩) ಬಂಧಿಗಳನ್ನು ಗುರ್ತಿಸುವ ಅಧಿನಿಯಮ, ೧೯೨೦ (೪) ಸರ್ಕಾರೀ ಉಳಿತಾಯ ಪ್ರಮಾಣ ಪತ್ರ ಅಧಿನಿಯಮ, ೧೯೫೯ (೫) ಭಾರತ ಮೀನುಗಾರಿಕೆ ಅಧಿನಿಯಮ, ೧೮೯೭ (೬) ಭಾರತೀಯ ಕ್ರೈಸ್ತರ ವಿವಾಹ ಅಧಿನಿಯಮ, ೧೮೭೨ (೭) ಜನಗಣತಿ ಅಧಿನಿಯಮ, ೧೯೪೮ (೮) ನಾವಿಕರ ಭವಿಷ್ಯ ನಿಧಿ ಅಧಿನಿಯಮ, ೧೯೬೬ (೯) ಏಷ್ಯಾ ಅಭಿವೃದ್ಧಿ ಬ್ಯಾಂಕ್ ಅಧಿನಿಯಮ, ೧೯೬೬ (೧೦) ಸರ್ಕಾರಿ ರಹಸ್ಯ ಅಧಿನಿಯಮ, ೧೯೨೩.

ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

# ಭಾರತ ಮೀನುಗಾರಿಕೆ ಅಧಿನಿಯಮ, 1897

**(1897ರ ಅಧಿನಿಯಮ ಸಂಖ್ಯೆ 4)**

[4ನೇ ಫೆಬ್ರವರಿ, 1897]

ಮೀನುಗಾರಿಕೆಗೆ ಸಂಬಂಧಿಸಿದಂತೆ ಕೆಲವು ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಮೀನುಗಾರಿಕೆಗೆ ಸಂಬಂಧಿಸಿದಂತೆ ಕೆಲವು ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ವಿಹಿತವಾಗಿರುವುದರಿಂದ,

ಈ ಕೆಳಕಂಡಂತೆ ಅಧಿನಿಯಮಿತಗೊಳಿಸಲಾಗಿದೆ:–

**1. ಹೆಸರು ಮತ್ತು ವ್ಯಾಪ್ತಿ.–** (1) ಈ ಅಧಿನಿಯಮವನ್ನು ಭಾರತ ಮೀನುಗಾರಿಕೆ ಅಧಿನಿಯಮ, 1897 ಎಂದು ಕರೆಯತಕ್ಕದ್ದು.

(2) ಇದು 1956ರ ನವೆಂಬರ್ 1ನೇ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಬಿ ಭಾಗದ ರಾಜ್ಯಗಳಲ್ಲಿದ್ದ ರಾಜ್ಯಕ್ಷೇತ್ರಗಳನ್ನು ಹೊರತುಪಡಿಸಿ, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

**2. ಈ ಅಧಿನಿಯಮವನ್ನು ಮೀನುಗಾರಿಕೆಗೆ ಸಂಬಂಧಿಸಿದ ಇತರ ಕಾನೂನುಗಳಿಗೆ ಪೂರಕವಾಗಿ ಓದಿಕೊಳ್ಳತಕ್ಕದ್ದು.–** ಸಾಮಾನ್ಯ ಖಂಡಗಳ ಅಧಿನಿಯಮ, 1887 (1887ರ 1)ರ 8ನೇ ಮತ್ತು 10ನೇ ಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟು, ಈ ಅಧಿನಿಯಮವನ್ನು, ಇದು ವ್ಯಾಪ್ತವಾಗುವ ರಾಜ್ಯ ಕ್ಷೇತ್ರಗಳಲ್ಲಿನ ಮೀನುಗಾರಿಕೆಗೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಅಧಿನಿಯಮಿತಿಗೆ ಪೂರಕವಾಗಿ ಓದಿಕೊಳ್ಳತಕ್ಕದ್ದು.

**3. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ವಿಷಯಕ್ಕೆ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಏನಾದರೂ ಇದ್ದ ಹೊರತು,–

(1) "ಮೀನು" ಚಿಪ್ಪು ಮೀನನ್ನು ಒಳಗೊಳ್ಳುತ್ತದೆ:

(2) "ಸ್ಥಿರಗೊಳಿಸಿದ ಸಾಧನ ಸಲರಣೆ" ಎಂದರೆ ಮೀನು ಹಿಡಿಯುವುದಕ್ಕಾಗಿ, ಮಣ್ಣಿನಲ್ಲಿ ನೆಡಲಾದ ಅಥವಾ ಇನ್ನಾವುದೇ ರೀತಿಯಲ್ಲಿ ಸ್ಥಿರವಾಗಿರುವಂತೆ ಮಾಡಿದ ಯಾವುದೇ ಬಲೆ, ಪಂಜರ, ಬೋನು ಅಥವಾ ಇತರ ಸಾಧನ; ಮತ್ತು

(3) "ಖಾಸಗಿ ಜಲಕ್ಷೇತ್ರ" ಎಂದರೆ ಯಾರೇ ವ್ಯಕ್ತಿಯ ಅನನ್ಯ ಸ್ವತ್ತಾಗಿರುವ ಅಥವಾ ಒಡೆಯನಾಗಿ, ಗುತ್ತಿಗೆದಾರನಾಗಿ ಅಥವಾ ಇತರ ಯಾವುದೇ ಅಧಿಕಾರದಿಂದ ಯಾರೇ ವ್ಯಕ್ತಿಯು

ಯಾವ ಜಲ ಕ್ಷೇತ್ರದಲ್ಲಿ ತತ್ಕಾಲದಲ್ಲಿ ಮೀನು ಹಿಡಿಯಲು ಅನನ್ಯ ಹಕ್ಕನ್ನು ಹೊಂದಿರುತ್ತಾನೋ ಆ ಜಲ ಕ್ಷೇತ್ರ.

**ವಿವರಣೆ**: ಇತರ ವ್ಯಕ್ತಿಗಳು ರೂಢಿಯಪ್ರಕಾರ ಖಾಸಗಿ ಜಲಕ್ಷೇತ್ರದಲ್ಲಿ ಮೀನು ಹಿಡಿಯುವ ಹಕ್ಕನ್ನು ಹೊಂದಿರಬಹುದಾದ ಕಾರಣಮಾತ್ರದಿಂದಲೇ ಈ ಪರಿಭಾಷೆಯ ವ್ಯಾಪ್ತಿಯೊಳಗೆ ಬರುವ ಜಲಕ್ಷೇತ್ರವು "ಖಾಸಗಿ ಜಲಕ್ಷೇತ್ರ" ವಾಗಿರುವುದು ನಿಂತು ಹೋಗತಕ್ಕದ್ದಲ್ಲ.

4. **ಒಳನಾಡಿನ ಜಲಕ್ಷೇತ್ರದಲ್ಲಿ ಮತ್ತು ಕರಾವಳಿಗಳಲ್ಲಿ ಸ್ಫೋಟಕಗಳ ಮೂಲಕ ಮೀನಿನ ನಾಶ.–** (1) ಯಾರೇ ವ್ಯಕ್ತಿಯು ಯಾವುದೇ ಜಲಕ್ಷೇತ್ರದಲ್ಲಿ ಅಲ್ಲಿರಬಹುದಾದ ಯಾವುದೇ ಮೀನನ್ನು ಹಿಡಿಯುವ ಅಥವಾ ನಾಶಪಡಿಸುವ ಉದ್ದೇಶದಿಂದ ಯಾವುದೇ ಸಿಡಿಮದ್ದನ್ನಾಗಲೀ ಅಥವಾ ಇತರ ಸ್ಫೋಟಕ ವಸ್ತುವನ್ನಾಗಲೀ ಬಳಸಿದರೆ, ಅವನು ಎರಡು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಎರಡುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) (1)ನೇ ಉಪ ಪ್ರಕರಣದಲ್ಲಿ "ಜಲಕ್ಷೇತ್ರ" ಎಂಬ ಪದವು ಸಮುದ್ರ ತೀರದಿಂದ ಒಂದು ನೌಕಾ ಹರದಾರಿ ಅಂತರದೊಳಗೆ ಇರುವ ಸಮುದ್ರವನ್ನು ಒಳಗೊಳ್ಳುತ್ತದೆ; ಮತ್ತು ಅಂಥ ಸಮುದ್ರದಲ್ಲಿ ಮೇಲಿನ ಉಪ ಪ್ರಕರಣದ ಮೇರೆಗೆ ಮಾಡಿದ ಅಪರಾಧದ ಬಗ್ಗೆ ಅದನ್ನು ಅಂಥ ಕರಾವಳಿಗೆ ಹೊಂದಿಕೊಂಡಿರುವ ಭೂಮಿಯ ಮೇಲೆ ಮಾಡಿದ್ದಿದ್ದರೆ ಹೇಗೋ ಹಾಗೇ ಅಧಿವಿಚಾರಣೆ ನಡೆಸಬಹುದು, ದಂಡಿಸಬಹುದು ಮತ್ತು ಎಲ್ಲ ರೀತಿಯಲ್ಲೂ ವ್ಯವಹರಿಸಬಹುದು.

5. **ಜಲಕ್ಷೇತ್ರಗಳಿಗೆ ವಿಷ ಹಾಕುವ ಮೂಲಕ ಮೀನನ್ನು ನಾಶಪಡಿಸುವುದು.–** (1) ಯಾವುದೇ ಮೀನನ್ನು ಹಿಡಿಯುವ ಅಥವಾ ನಾಶಪಡಿಸುವ ಉದ್ದೇಶದಿಂದ ಯಾರೇ ವ್ಯಕ್ತಿಯು ಯಾವುದೇ ಜಲಕ್ಷೇತ್ರದಲ್ಲಿ ಯಾವುದೇ ವಿಷವನ್ನು, ಸುಣ್ಣವನ್ನು ಅಥವಾ ಹಾನಿಕರ ಪದಾರ್ಥವನ್ನು ಹಾಕಿದರೆ, ಅವನು ಎರಡು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಎರಡುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(2) ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಪ್ರಕರಣದ ಜಾರಿಯನ್ನು ಯಾವುದೇ ನಿರ್ದಿಷ್ಟ ಪ್ರದೇಶದಲ್ಲಿ ತಡೆಹಿಡಿಯಬಹುದು ಮತ್ತು ಅದೇ ರೀತಿಯಲ್ಲಿ ಅಂಥ ಯಾವುದೇ ಅಧಿಸೂಚನೆಯನ್ನು ಮಾರ್ಪಾಡು ಮಾಡಬಹುದು ಅಥವಾ ರದ್ದುಗೊಳಿಸಬಹುದು.

6. **ಆಯ್ಕೆ ಮಾಡಿದ ಜಲಕ್ಷೇತ್ರಗಳಲ್ಲಿ ರಾಜ್ಯ ಸರ್ಕಾರದ ನಿಯಮಗಳ ಮೂಲಕ ಮೀನಿನ ಸಂರಕ್ಷಣೆ.–** (1) ರಾಜ್ಯ ಸರ್ಕಾರವು, ಈ ಪ್ರಕರಣದಲ್ಲಿ ಇನ್ನು ಮುಂದೆ ಹೇಳಿರುವ ಉದ್ದೇಶಗಳಿಗಾಗಿ ನಿಯಮಗಳನ್ನು ರಚಿಸಬಹುದು ಮತ್ತು ಸರ್ಕಾರಿ ರಾಜ್ಯಪತ್ರದಲ್ಲಿ, ಅಧಿಸೂಚನೆಯ ಮೂಲಕ ಅಂಥ ಎಲ್ಲ

ಅಥವಾ ಯಾವುದೇ ನಿಯಮಗಳನ್ನು ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಖಾಸಗಿ ಜಲಕ್ಷೇತ್ರಗಳಾಗಿರದಂಥ ಜಲಕ್ಷೇತ್ರಗಳಿಗೆ ಅನ್ವಯಿಸಬಹುದು.

(2) ರಾಜ್ಯ ಸರ್ಕಾರವು, ಅಂಥದೇ ಅಧಿಸೂಚನೆಯ ಮೂಲಕ, ಅಂಥ ಎಲ್ಲ ನಿಯಮಗಳನ್ನು ಅಥವಾ ಅವುಗಳ ಪೈಕಿ ಯಾವುದನ್ನಾದರೂ ಯಾವುದೇ ಖಾಸಗಿ ಜಲಕ್ಷೇತ್ರದ ಒಡೆಯನ ಮತ್ತು ತತ್ಕಾಲದಲ್ಲಿ ಅದರಲ್ಲಿ ಮೀನುಗಾರಿಕೆಯ ಅನನ್ಯ ಹಕ್ಕನ್ನು ಪಡೆದಿರುವ ಎಲ್ಲ ವ್ಯಕ್ತಿಗಳ ಸಮ್ಮತಿಯನ್ನು ಬರಹದ ಮೂಲಕ ಪಡೆದು ಅದಕ್ಕೂ ಸಹ ಅನ್ವಯಿಸಬಹುದು.

(3) ಅಂಥ ನಿಯಮಗಳು ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಗಳನ್ನು ನಿಷೇಧಿಸಬಹುದು ಅಥವಾ ವಿನಿಯಮನಗೊಳಿಸಬಹುದು, ಎಂದರೆ:–

(ಎ) ಸ್ಥಿರ ಸಾಧನ–ಸಲಕರಣೆಗಳನ್ನು ನಡೆಸುವುದು ಮತ್ತು ಬಳಸುವುದು

(ಬಿ) ಅಡ್ಡಕಟ್ಟೆಗಳ ನಿರ್ಮಾಣ; ಮತ್ತು

(ಸಿ) ಬಳಸಬೇಕಾದ ಬಲೆಗಳ ಅಳತೆ ಮತ್ತು ಬಗೆ ಮತ್ತು ಅವುಗಳನ್ನು ಬಳಸುವ ವಿಧಾನಗಳು;

(4) ಅಂಥ ನಿಯಮಗಳು ಯಾವುದೇ ನಿರ್ದಿಷ್ಟಪಡಿಸಿದ ಜಲಕ್ಷೇತ್ರದಲ್ಲಿ ಎರಡು ವರ್ಷಗಳಿಗೆ ಮೀರದ ಅವಧಿಗೆ ಯಾವುದೇ ಮೀನು ಹಿಡಿಯುವುದನ್ನು ಸಹ ಸಂಪೂರ್ಣವಾಗಿ ನಿಷೇಧಿಸಬಹುದು.

(5) ಈ ಪ್ರಕರಣದ ಮೇರೆಗೆ ಯಾವುದೇ ನಿಯಮವನ್ನು ರಚಿಸುವಾಗ, ರಾಜ್ಯ ಸರ್ಕಾರವು–

(ಎ) ಅದರ ಯಾವುದೇ ಉಲ್ಲಂಘನೆಯು ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಉಲ್ಲಂಘನೆಯು ಮುಂದುವರೆಯುತ್ತಿರುವ ಉಲ್ಲಂಘನೆಯಾಗಿದ್ದಲ್ಲಿ ಮೊದಲ ನಿರ್ಣೀತ ಅಪರಾಧದ ದಿನಾಂಕದ ತರುವಾಯ, ಉಲ್ಲಂಘನೆಯು ಸತತವಾಗಿ ಮುಂದುವರೆದಿದೆಯೆಂದು ರುಜುವಾತಾದ ಅವಧಿಯಲ್ಲಿ ಪ್ರತಿಯೊಂದು ದಿನಕ್ಕೆ ಹತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದೆಂದು ನಿರ್ದೇಶಿಸಬಹುದು; ಮತ್ತು

(ಬಿ) (i) ನಿಯಮವನ್ನು ಉಲ್ಲಂಘಿಸಿ ನಡೆಸಲಾದ ಅಥವಾ ಬಳಸಲಾದ ಸ್ಥಿರ ಯಂತ್ರ ಸಾಧನ ಸಲಕರಣಗಳನ್ನು ಅಥವಾ ಬಳಸಿದ ಬಲೆಗಳನ್ನು ಜಪ್ತಿಮಾಡುವ, ಮುಟ್ಟುಗೋಲು ಹಾಕಿಕೊಳ್ಳುವ ಮತ್ತು ಅವುಗಳನ್ನು ತೆಗೆದುಹಾಕುವ ಬಗ್ಗೆ; ಮತ್ತು

(ii) ಅಂಥ ಯಾವುದೇ ಸ್ಥಿರ ಸಾಧನ ಸಲಕರಣೆ ಅಥವಾ ಬಲೆಯ ಮೂಲಕ ಹಿಡಿಯಲಾದ ಯಾವುದೇ ಮೀನನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ

–ಉಪಬಂಧಿಸಬಹುದು.

(6) ಈ ಪ್ರಕರಣದ ಮೇರೆಗೆ ನಿಯಮಗಳನ್ನು ರಚಿಸುವ ಅಧಿಕಾರವು ಪೂರ್ವ ಪ್ರಕಟಣೆಯ ನಂತರ ಅವುಗಳನ್ನು ರಚಿಸಬೇಕೆಂಬ ಷರತ್ತಿಗೆ ಒಳಪಟ್ಟಿರತಕ್ಕದ್ದು.

7. **ಈ ಅಧಿನಿಯಮದ ಮೇರೆಗಿನ ಅಪರಾಧಗಳಿಗೆ ವಾರಂಟ್ ಇಲ್ಲದೆ ದಸ್ತಗಿರಿ.**– (1)ಯಾರೇ ಪೊಲೀಸು ಅಧಿಕಾರಿಯು ಅಥವಾ ಈ ಬಗ್ಗೆ ರಾಜ್ಯ ಸರ್ಕಾರವು ಹೆಸರಿನ ಮೂಲಕ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಹುದ್ದೆಯನ್ನು ಧಾರಣ ಮಾಡಿರುವನೆಂದು ವಿಶೇಷವಾಗಿ ಅಧಿಕೃತನಾದ ಯಾರೇ ವ್ಯಕ್ತಿಯು, 4ನೇ ಅಥವಾ 5ನೇ ಪ್ರಕರಣದ ಮೇರೆಗೆ ಅಥವಾ 6ನೇ ಪ್ರಕರಣದ ಮೇರೆಗಿನ ಯಾವುದೇ ನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಯಾರೇ ವ್ಯಕ್ತಿಯು ಮಾಡುತ್ತಿರುವುದನ್ನು ನೋಡಿದರೆ,

(ಎ) ಆ ವ್ಯಕ್ತಿಯ ಹೆಸರು ಮತ್ತು ವಿಳಾಸವು ಅವನಿಗೆ ಗೊತ್ತಿಲ್ಲದಿದ್ದರೆ; ಮತ್ತು

(ಬಿ) ಹೆಸರು ಮತ್ತು ವಿಳಾಸವನ್ನು ಕೊಡಲು ಆ ವ್ಯಕ್ತಿಯು ನಿರಾಕರಿಸಿದರೆ ಅಥವಾ ಆ ವ್ಯಕ್ತಿಯು ಕೊಟ್ಟ ಹೆಸರು ಮತ್ತು ವಿಳಾಸವು ಸರಿಯಾಗಿಲ್ಲವೆಂದು ಸಂದೇಹ ಪಡಲು ಕಾರಣವಿದ್ದರೆ;

–ದಂಡಾಧಿಕಾರಿಯ ಆದೇಶವಿಲ್ಲದೆಯೇ ಮತ್ತು ವಾರಂಟಿಲ್ಲದೆಯೇ, ದಸ್ತಗಿರಿ ಮಾಡಬಹುದು.

(2) ಈ ಪ್ರಕರಣದ ಮೇರೆಗೆ ದಸ್ತಗಿರಿ ಮಾಡಲಾದ ಯಾರೇ ವ್ಯಕ್ತಿಯನ್ನು, ಅವನ ಹೆಸರು ಮತ್ತು ವಿಳಾಸವನ್ನು ಸರಿಯಾಗಿ ಖಚಿತಪಡಿಸಿಕೊಳ್ಳುವವರೆಗೆ ತಡೆಹಿಡಿದಿಟ್ಟುಕೊಳ್ಳಬಹುದು;

ಪರಂತು, ಹಾಗೆ ದಸ್ತಗಿರಿ ಮಾಡಲಾದ ಯಾರೇ ವ್ಯಕ್ತಿಯನ್ನು, ಅವನನ್ನು ಹಾಗೆ ತಡೆಹಿಡಿದಿಟ್ಟುಕೊಳ್ಳಲು ದಂಡಾಧಿಕಾರಿಯ ಆದೇಶವಿಲ್ಲದಿದ್ದರೆ ದಂಡಾಧಿಕಾರಿಯ ಮುಂದೆ ಹಾಜರುಪಡಿಸುವುದಕ್ಕೆ ಅಗತ್ಯವಾದುದಕ್ಕಿಂತ ಹೆಚ್ಚಿನ ಅವಧಿಯವರೆಗೆ ತಡೆಹಿಡಿದಿಟ್ಟುಕೊಳ್ಳತಕ್ಕದ್ದಲ್ಲ.

*******